## ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 2353

ಮಾನ್ಯ ಸದಸ್ಯರ ಹೆಸರು : ಶ್ರೀ ಕೆ.ಎಸ್.ನವೀನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಉತ್ತರಿಸಬೇಕಾದ ದಿನಾಂಕ : 21.03.2022

ಉತ್ತರಿಸಬೇಕಾದ ಸಚಿವರು : ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು

| ಕ್ರ ಸಂ | ಪ್ರಶ್ನೆಗಳು | ಉತ್ತರ |
|---|---|---|
| ಅ) | ರಾಜ್ಯದಲ್ಲಿ 18 ವರ್ಷದೊಳಗಿನ ಮಕ್ಕಳು ಟೈಪ್-1 ಡಯಾಬಿಟಿಸ್ ನಿಂದ ಬಳಲುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದಿಯೇ; ಇಂತಹ ಮಕ್ಕಳ ಬಗ್ಗೆ ಸಮಗ್ರ ಮಾಹಿತಿಯನ್ನು ಸಂಗ್ರಹಿಸಲಾಗಿದೆಯೇ; (ಜಿಲ್ಲಾವಾರು ಮಾಹಿತಿಯನ್ನು ನೀಡುವುದು) | ಹೌದು.<br>ರಾಷ್ಟ್ರೀಯ ಆರೋಗ್ಯ ಅಭಿಯಾನದ ರಾಷ್ಟ್ರೀಯ ಬಾಲ ಸ್ವಾಸ್ಥ್ಯ ಕಾರ್ಯಕ್ರಮದಡಿಯಲ್ಲಿ ಸರ್ಕಾರಿ ಹಾಗೂ ಅನುದಾನಿತ ಶಾಲೆ, ಕಾಲೇಜು ಮತ್ತು ಅಂಗನವಾಡಿ ಕೇಂದ್ರಗಳಲ್ಲಿ 0-18 ವರ್ಷ ಮಕ್ಕಳ ಆರೋಗ್ಯ ತಪಾಸಣೆಯನ್ನು ನಡೆಸಲಾಗುತ್ತದೆ. ಕೋವಿಡ್-19ರ ಹಿನ್ನಲೆಯಲ್ಲಿ 2021-2022ನೇ ಸಾಲಿನ ಆರ್.ಬಿ.ಎಸ್.ಕೆ ಅಡಿಯಲ್ಲಿ "ಆರೋಗ್ಯ ನಂದನ" ಎಂಬ ವಿಶೇಷ ತಪಾಸಣೆ ಅಭಿಯಾನ ನಡೆಸಲಾಗಿದ್ದು, ಆರ್.ಬಿ.ಎಸ್.ಕೆ ವೈದ್ಯಕೀಯ ತಂಡಗಳಿಂದ ಒಟ್ಟು:78,32,939 ಮಕ್ಕಳ ಆರೋಗ್ಯ ತಪಾಸಣೆ ನಡೆಸಲಾಗಿರುತ್ತದೆ. ಇದರಲ್ಲಿ ಒಟ್ಟು:1884 ಮಕ್ಕಳು ಡಯಾಬಿಟಿಸ್ ನಿಂದ ಬಳಲುತ್ತಿರುವುದನ್ನು ಗುರುತಿಸಲಾಗಿದ್ದು, ಚಿಕಿತ್ಸಾತ್ಮಕ ಸೇವೆಗಳಿಗೆ ಆರೋಗ್ಯ ಕೇಂದ್ರಗಳಿಗೆ ರೆಫರ್ ಮಾಡಲಾಗುತ್ತದೆ.<br>ಜಿಲ್ಲಾವಾರು ವಿವರಗಳನ್ನು **ಅನುಬಂಧದಲ್ಲಿ** ನೀಡಲಾಗಿದೆ. |
| ಆ) | ಆ ಮಕ್ಕಳ ಆರೋಗ್ಯದ ಹಿತ ದೃಷ್ಟಿಯಿಂದ ಉಚಿತ ಚಿಕಿತ್ಸೆ ಮತ್ತು ಲ್ಯಾಬೋರೇಟರಿ ತಪಾಸಣೆಯಂತ ಸೌಲಭ್ಯಗಳನ್ನು ತಾಲ್ಲೂಕು ಮಟ್ಟದಲ್ಲಿ ಸ್ಥಾಪಿಸಲು ಸರ್ಕಾರ ಕೈಗೊಂಡ ಕ್ರಮಗಳೇನು? (ವಿವರ ನೀಡುವುದು) | ತಾಲ್ಲೂಕು ಮಟ್ಟದಲ್ಲಿ ಟೈಪ್-1 ಡಯಾಬಿಟಿಸ್ ಪತ್ತೆಹಚ್ಚಲು ಈಗಾಗಲೇ ಲ್ಯಾಬ್ ವ್ಯವಸ್ಥೆ ಕಲ್ಪಿಸಲಾಗಿದ್ದು, ಮಕ್ಕಳಿಗೆ ಉಚಿತವಾಗಿ ತಪಾಸಣೆ ಮತ್ತು ಚಿಕಿತ್ಸೆ ನೀಡಲಾಗುತ್ತಿದೆ. INSULIN ಹಾಗೂ ಇತರೆ ಡಯಾಬಿಟಿಸ್ ಔಷಧಿಗಳನ್ನು ಸಹ ಉಚಿತವಾಗಿ ನೀಡಲಾಗುವುದು. |
| ಇ) | ಈ ಸಮಸ್ಯೆಯನ್ನು ಎದುರಿಸುತ್ತಿರುವ ಬಡ ಮಕ್ಕಳಿಗೆ ಪ್ರತಿ ತಿಂಗಳಿನ ವೈದ್ಯಕೀಯ ವೆಚ್ಚವನ್ನು ಸರ್ಕಾರದಿಂದ ಭರಿಸುವ ಕುರಿತು ಯೋಜನೆ ರೂಪಿಸಲು ಸರ್ಕಾರ ಕೈಗೊಂಡ ಕ್ರಮಗಳೇನು? | ತಾಲ್ಲೂಕು ಮತ್ತು ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ ಮಕ್ಕಳ ವೈದ್ಯರ ಮೇಲ್ವಿಚಾರಣೆಯಲ್ಲಿ ಈ ಸಮಸ್ಯೆಯನ್ನು ಎದುರಿಸುತ್ತಿರುವ ಬಡ ಮಕ್ಕಳಿಗೆ ಪ್ರತಿ ತಿಂಗಳು ಚಿಕಿತ್ಸೆ ಬೇಕಾರುವ ಔಷಧಿಗಳನ್ನು ಉಚಿತವಾಗಿ ಸರಬರಾಜು ಮಾಡಲಾಗುತ್ತಿದೆ. |

**ಆ.ಕು.ಕ 43 ಎಸ್.ಟಿ.ಕ್ಯೂ 2022**

(ಡಾ|| ಕೆ.ಸುಧಾಕರ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ
ವೈದ್ಯಕೀಯ ಶಿಕ್ಷಣ ಸಚಿವರು

| "ಅನುಬಂಧ-1" | | | | |
|---|---|---|---|---|
| Sl. No | Name of District | Diabetes | | GRAND TOTAL |
| | | Male | Female | |
| 1 | Bangalore Urban | 5 | 13 | 18 |
| 2 | Bangalore Rural | 3 | 3 | 6 |
| 3 | Ramanagara | 6 | 6 | 12 |
| 4 | Kolar | 5 | 1 | 6 |
| 5 | Chikkaballapura | 1 | 0 | 1 |
| 6 | Shivamogga | 2 | 8 | 10 |
| 7 | Chitradurga | 6 | 8 | 14 |
| 8 | Davanagere | 36 | 51 | 87 |
| 9 | Tumkur | 3 | 10 | 13 |
| 10 | Mysuru | 11 | 5 | 16 |
| 11 | Chamarajanagara | 3 | 2 | 5 |
| 12 | Mangalore-DK | 3 | 7 | 10 |
| 13 | Udupi | 0 | 0 | 0 |
| 14 | Mandya | 4 | 8 | 12 |
| 15 | Kodagu | 3 | 7 | 10 |
| 16 | Hassan | 0 | 2 | 2 |
| 17 | Chikkamagalur | 15 | 15 | 30 |
| 18 | Belgaum | 13 | 20 | 33 |
| 19 | Karwar(UK) | 0 | 1 | 1 |
| 20 | Dharwad | 2 | 1 | 3 |
| 21 | Gadag | 1 | 0 | 1 |
| 22 | Haveri | 4 | 6 | 10 |
| 23 | Vijayapura | 5 | 2 | 7 |
| 24 | Bagalkote | 20 | 0 | 20 |
| 25 | Kalaburgi | 14 | 9 | 23 |
| 26 | Bidar | 2 | 1 | 3 |
| 27 | Bellary | 40 | 6 | 46 |
| 28 | Raichur | 744 | 704 | 1448 |
| 29 | Koppal | 7 | 10 | 17 |
| 30 | Yadgiri | 0 | 0 | 0 |
| 31 | BBMP | 3 | 17 | 20 |
| Grand Total | | 961 | 923 | 1884 |

RL 18.3.22
ಆಯುಕ್ತರು
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು.